# ಆದಿತ್ಯ ಘೋಷ್ ಎಂಬ ಅಚ್ಚರಿ

ವಿಶ್ವ ಆರ್ಥಿಕ ವೇದಿಕೆ (world economic forum) ಕಳೆದ ವಾರ 'ಜಾಗತಿಕ ಯುವ ನಾಯಕರ ಪ್ರಶಸ್ತಿ'ಯನ್ನು ಘೋಷಿಸಿತು. ಆ ಪಟ್ಟಿಯಲ್ಲಿ ಹೆಚ್ಚು ಕುತೂಹಲ ಹುಟ್ಟಿಸಿದ ಹೆಸರು ಆದಿತ್ಯ ಘೋಷ್ ಅವರದ್ದು. 36ರ ಹರೆಯದ ಆದಿತ್ಯ ಘೋಷ್ ಇವತ್ತು ಭಾರತೀಯ ಉದ್ಯಮ– ಆಡಳಿತ ಕ್ಷೇತ್ರದಲ್ಲಿ ಎಲ್ಲರೂ ಅಚ್ಚರಿಯಿಂದ ನೋಡುತ್ತಿರುವ ವ್ಯಕ್ತಿ. ಭಾರತದ ವಾಯುಯಾನ ಕ್ಷೇತ್ರದಲ್ಲಿ ಕಳೆದ 4 ವರ್ಷಗಳಿಂದ ಅತ್ಯುತ್ತಮ ಆಡಳಿತಕ್ಕೆ ಮತ್ತು ಅತ್ಯಧಿಕ ವೇಗದ ಬೆಳವಣಿಗೆಗೆ ಹೆಸರಾದ 'ಇಂಡಿಗೋ ಏರ್‌ಲೈನ್ಸ್'ನ ಅಧ್ಯಕ್ಷ ಆದಿತ್ಯ ಘೋಷ್.

ದೆಹಲಿ ವಿಶ್ವವಿದ್ಯಾಲಯದಲ್ಲಿ ಮೊದಲ ವರ್ಷದ ಕಾನೂನು ವ್ಯಾಸಂಗಕ್ಕೆ ಸೇರಿದಾಗಲೂ, ಆದಿತ್ಯ ಘೋಷ್ ಗಮನ ಇದ್ದದ್ದು ಯಾವುದಾದರೂ ಬಿ–ಸ್ಕೂಲ್‌ಗೆ ಸೇರಬೇಕೆಂದು. ಒಮ್ಮೆ ಗೆಳೆಯನೊಬ್ಬನ ತಂದೆಯ ಬಳಿ ಆದಿತ್ಯ 'ಕಾನೂನು ವಿದ್ಯಾಭ್ಯಾಸಕ್ಕಿಂತ ಮ್ಯಾನೇಜ್‌ಮೆಂಟ್ ವಿದ್ಯೆಯೇ ಮೇಲು' ಎಂದು ತರ್ಕಬದ್ಧವಾಗಿ ವಾದಿಸಿದನಂತೆ. ಅವರು ವಕೀಲರೂ ಆಗಿದ್ದರು. 'ಚೆನ್ನಾಗಿ ವಾದಿಸುತ್ತೀಯ, ನನ್ನ ಜತೆಗಿರು' ಎಂದು ಆತನಿಗೆ ಟ್ರೈನೀ ಕೆಲಸ ಕೊಟ್ಟರು. ಹಾಗೆ ವಕಾಲತ್ತಿನ ಮೇಲೆ ಆಸಕ್ತಿ ಹುಟ್ಟಿ, ಕೊನೆಗೊಂದು ದಿನ ಬಾಸ್ಮತಿ ಅಕ್ಕಿ ಮತ್ತು ಅರಿಶಿಣದ ಪೇಟೆಂಟ್ ಪ್ರಕರಣದಲ್ಲಿ ಸೀನಿಯರ್ ವಕೀಲರಿಗೆ ಏಕೈಕ ಸಹಾಯಕನಾಗಿ ವಾದಿಸಿ ಗೆದ್ದಾತ ಈ ಆದಿತ್ಯ. ಅಲ್ಲಿಂದ ಸೇರಿದ್ದು ಪ್ರತಿಷ್ಠಿತ ಜೆಎಸ್‌ಎ ಲಾಯರ್ಸ್ ಆ್ಯಂಡ್ ಸಾಲಿಸಿಟರ್ಸ್ ಕಂಪೆನಿಯನ್ನು. ಗ್ಲಾಕ್ಸೊ, ಪೆಪ್ಸಿಕೊ, ವಿಶ್ವಬ್ಯಾಂಕ್ ಮುಂತಾದ ಪ್ರತಿಷ್ಠಿತ ಗ್ರಾಹಕರನ್ನು ಹೊಂದಿದ್ದ ಕಂಪೆನಿಯದು. ಆ ಕಂಪೆನಿಯ ಪರವಾಗಿ ಆದಿತ್ಯ ಘೋಷ್, ಇಂಟರ್‌ಗ್ಲೋಬ್ ಎಂಟರ್‌ಪ್ರೈಸಸ್ ಕಂಪೆನಿಯ ವಕಾಲತ್ತು ಸೇವೆಗೆ ತೆರಳಿದ್ದು ಆತನ ಜೀವನವನ್ನೇ ಬದಲಾಯಿಸಿತು. ಮಹತ್ವಾಕಾಂಕ್ಷಿ ಉದ್ಯಮಿಗಳಾದ ಇಂಟರ್‌ಗ್ಲೋಬ್‌ನ ರಾಹುಲ್ ಭಾಟಿಯಾ ಮತ್ತು ವರ್ಜೀನಿಯಾದ ಕಾಲಂ ಇನ್‌ವೆಸ್ಟ್‌ಮೆಂಟ್ಸ್‌ನ ರಾಕೇಶ್ ಗಂಗ್ವಾಲ್ ಸೇರಿ ಪ್ರಮೋಟ್ ಮಾಡಿದ ಇಂಡಿಗೋ ಏರ್‌ಲೈನ್ಸ್, ಕಳೆದ 3 ವರ್ಷಗಳಲ್ಲಿ 'ಭಾರತದ ಅತ್ಯುತ್ತಮ ಏರ್‌ಲೈನ್ ಕಂಪೆನಿ' ಎಂಬ ಹೆಸರು ಪಡೆದುಕೊಳ್ಳುವಲ್ಲಿ ಆದಿತ್ಯ ಘೋಷ್ ಬುದ್ಧಿವಂತಿಕೆ ಮತ್ತು ಆಡಳಿತ ಕೌಶಲ್ಯ ದೊಡ್ಡ ಪಾತ್ರ ವಹಿಸಿದೆ. ಆರಂಭದಲ್ಲಿ ಸಂಸ್ಥೆಯ ವಕೀಲನಾಗಿದ್ದ ಘೋಷ್, ವಿಮಾನ ಕ್ಷೇತ್ರದಲ್ಲಿ ಉದ್ಯಮ ವಿಸ್ತರಣೆಗೆ ಸಲಹೆ ನೀಡಿದ್ದೂ ಅಲ್ಲದೆ, 100 'ಏರ್‌ಬಸ್–320' ಖರೀದಿಯಲ್ಲಿ ತುಂಬ ಜಾಣ್ಮೆಯಿಂದ ವ್ಯವಹಾರ ನಡೆಸಿದ. ಹೀಗಾಗಿ ಯಾವ ಮ್ಯಾನೇಜ್‌ಮೆಂಟ್ ಸರ್ಟಿಫಿಕೇಟೂ ಇಲ್ಲದೆ, ಕೆಲವೇ ವರ್ಷಗಳಲ್ಲಿ ಕಂಪೆನಿಯ ಅಧ್ಯಕ್ಷ ಹುದ್ದೆಗೆ ಏರಿದ.



2006ರಲ್ಲಿ 6 ವಿಮಾನಗಳೊಂದಿಗೆ ವ್ಯವಹಾರ ಆರಂಭಿಸಿದ ಇಂಡಿಗೋ, ಈಗ 97 ವಿಮಾನಗಳನ್ನು ಹೊಂದಿದೆ. ಜಗತ್ತಿನ ಅತ್ಯುತ್ತಮ ಬಜೆಟ್ ಏರ್‌ಲೈನ್ಸ್ ಕಂಪೆನಿಯಾಗಿರುವ ಸೌತ್‌ವೆಸ್ಟ್ ಏರ್‌ಲೈನ್ಸ್, ಸ್ಪಿರಿಟ್ ಏರ್‌ಲೈನ್ಸ್ ಮತ್ತು ರ್‍ಯಾನ್ ಏರ್ ಸಂಸ್ಥೆಗಳ ಜತೆಗೆ ಪೈಪೋಟಿಗೆ ನಿಂತಿದೆ. ಇಂಡೋನೇಷ್ಯಾದ 'ಲಯನ್ ಏರ್' ಬಿಟ್ಟರೆ ಜಗತ್ತಿನಲ್ಲಿ ಅತ್ಯಂತ ಕ್ಷಿಪ್ರ ಅವಧಿಯಲ್ಲಿ ಅತ್ಯಧಿಕ ಲಾಭ ಗಳಿಸಿದ ಮೊದಲ ಕಂಪೆನಿ ಇಂಡಿಗೋ ಏರ್‌ಲೈನ್ಸ್. ಇವತ್ತು 38 ರಾಷ್ಟ್ರೀಯ ನಗರಗಳು ಮತ್ತು ಐದು ಅಂತರರಾಷ್ಟ್ರೀಯ ನಗರಗಳಿಗೆ ಪ್ರತಿದಿನ 600 ಟ್ರಿಪ್‌ಗಳನ್ನು ಇಂಡಿಗೋ ನಡೆಸುತ್ತಿದೆ. ಆದಿತ್ಯ ಘೋಷ್ ಹೆಗ್ಗಳಿಕೆಯೆಂದರೆ ಸಿಬ್ಬಂದಿಯ ಜತೆಗೆ ಒಬ್ಬರಾಗಿ ಬೆರೆತು ಕೆಲಸ ಮಾಡುವುದು. 26 ನಗರಗಳಲ್ಲಿರುವ ಸುಮಾರು 4000 ಸಿಬ್ಬಂದಿಗೆ ಯಾರಿಗೆ ಬೇಕಾದರೂ ಆದಿತ್ಯ ಫೋನ್ ಸಂಪರ್ಕಕ್ಕೆ ಸಿಗುತ್ತಾರಂತೆ. ಫ್ಲೈಟ್‌ನಲ್ಲಿರುವಾಗ ಬಿಟ್ಟರೆ ಇಡೀ ದಿನ ಇವರ ಮೊಬೈಲ್ ಆನ್ ಇರುತ್ತದಂತೆ.

ಪತ್ರಕರ್ತರು, ಪ್ರಚಾರ ಎಂದರೆ ಆದಿತ್ಯಗೆ ಅಷ್ಟಕ್ಕಷ್ಟೆ! ಒಮ್ಮೆ ಪತ್ರಿಕಾ ಛಾಯಾಗ್ರಾಹಕರೊಬ್ಬರು 'ಏರ್‌ಹೋಸ್ಟೆಸ್ ಜತೆ ನಿಂತುಕೊಂಡು ದಯವಿಟ್ಟು ಒಂದು ಪೋಸ್ ಕೊಡಿ' ಎಂದು ಕೇಳಿದ್ದಕ್ಕೆ, 'ಕ್ಷಮಿಸಿ, ನಾನು ವಿಜಯ ಮಲ್ಯ ಅಲ್ಲ' ಎಂದರಂತೆ! ಪತ್ರಿಕೆಗಳು ಸಂದರ್ಶನ ಕೇಳಿದಾಗಲೂ ನಿರಾಕರಿಸಿದ್ದೇ ಹೆಚ್ಚು. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಒಮ್ಮೆ ಎಲ್ಲ ಏರ್‌ಲೈನ್ಸ್ ಕಂಪೆನಿಗಳ ಮುಖ್ಯಸ್ಥರು ಉದ್ಯಮ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲು ಹೋಗಿದ್ದರು. ಎಲ್ಲರೂ ಐಶಾರಾಮಿ ಕಾರ್‌ಗಳಲ್ಲಿ ಪ್ರಧಾನಿ ನಿವಾಸಕ್ಕೆ ಡ್ರೈವರ್ ಜತೆಗೆ ಬಂದರೆ, ಆದಿತ್ಯ ಘೋಷ್, ವ್ಯಾಗನ್‌ಆರ್ 'ಸಿಎನ್‌ಜಿ' ಕಾರಿನಲ್ಲಿ ಸ್ವತಃ ಡ್ರೈವ್ ಮಾಡಿಕೊಂಡು ಹೋಗಿದ್ದರಂತೆ. ಕೇಳಿದರೆ, 'ನಮ್ಮ ಏರ್‌ಪೋರ್ಟ್‌ನಲ್ಲಿ ಇದ್ದದ್ದೇ ಮೂರು ಕಾರುಗಳು. ಅದರಲ್ಲಿ ಎರಡು ಪ್ರಯಾಣಿಕರನ್ನು ಕರೆದೊಯ್ಯಲು ಹೋಗಿತ್ತು, ಇದೊಂದೇ ಉಳಿದಿತ್ತು' ಎಂದರಂತೆ.

ಹಾರಾಟದಲ್ಲಿ ಸಮಯ ಪಾಲನೆ ಮತ್ತು ಮಿತವ್ಯಯ, ಇಂಡಿಗೋ ಏರ್‌ಲೈನ್ಸ್‌ನ ಯಶಸ್ಸಿನ ಗುಟ್ಟು. ಏರ್‌ಬಸ್–320 ಯಲ್ಲಿ ಪೆಟ್ರೋಲ್ ಬಳಕೆ ಕಡಿಮೆ. ಜತೆಗೆ ನಿರ್ವಹಣೆ ವೆಚ್ಚ ಮತ್ತು ಪೈಲಟ್ ತರಬೇತಿ ವೆಚ್ಚವೂ ಕಡಿಮೆಯೇ. ವಿಮಾನ ಮತ್ತು ಗ್ರೌಂಡ್ ಸ್ಟೇಶನ್ ನಡುವೆ ಕ್ಲುಪ್ತ ಕಾಲಕ್ಕೆ ರೇಡಿಯೊ/ ಉಪಗ್ರಹ ಮೂಲಕ ಸಂದೇಶ ಕಳಿಸಲು ಡಿಜಿಟಲ್ ಡಾಟಾ ಲಿಂಕ್ ಸಿಸ್ಟಮ್ ಅನ್ನು ಬಳಸುತ್ತಿರುವುದು ಎಲ್ಲ ವಿಮಾನಗಳೂ ಸರಿಯಾದ ಸಮಯಕ್ಕೆ ಹಾರಾಟ ನಡೆಸಲು ನೆರವಾಗಿದೆ. ಏರ್‌ಪೋರ್ಟ್ ಲಾಂಜ್ ಕಡಿತ, ಗಣ್ಯರಿಗೆ ವಿಶೇಷ ಕೌಂಟರ್ ಇಲ್ಲದಿರುವುದು, ವಿಮಾನದಲ್ಲಿ ಟೀವಿ ಸೌಲಭ್ಯ ಇಲ್ಲದಿರುವುದು– ಹೀಗೆ ದರ ಕಡಿತಕ್ಕೆ ಆದಿತ್ಯ ಅನುಸರಿಸಿದ ಕ್ರಮಗಳು ಹಲವಾರು. 'ವಿಮಾನ ಕಂಪೆನಿಯ ಮಾಲೀಕನ ಹೆಸರು ಗೊತ್ತಿದೆ ಎನ್ನುವ ಒಂದೇ ಕಾರಣಕ್ಕೆ ಯಾರೂ ಆ ವಿಮಾನದಲ್ಲಿ ಪ್ರಯಾಣ ಬೆಳೆಸುವುದಿಲ್ಲ' ಎನ್ನುವುದು ಆದಿತ್ಯ ಘೋಷ್‌ರ ಫೇಮಸ್ ಸ್ಟೇಟ್‌ಮೆಂಟ್! ಸದಾ ಟಿ ಶರ್ಟ್ ಮತ್ತು ಜೀನ್ಸ್‌ನಲ್ಲಿರುವ ಆದಿತ್ಯ, ಕಂಪೆನಿಯ ಉದ್ಯೋಗಿಗಳ ವಿಶ್ವಾಸ ಗಳಿಸಿದ್ದರಿಂದಲೇ ಕಂಪೆನಿಗೆ 'ಬೆಸ್ಟ್ ಎಂಪ್ಲಾಯರ್ ಆಫ್ ದಿ ಇಯರ್' ಪ್ರಶಸ್ತಿಯೂ ಲಭಿಸಿದೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65